# ಮೆಡಿಸಿನ್ ಬಾಬಾ



■ ಪ್ರವೀಣ ಕುಲಕರ್ಣಿ

'ಅಕ್ಕಾ–ಅಣ್ಣಾ, ಬಳಕೆಯಾಗದ ಔಷಧಿ ಇದ್ದರೆ ದಯವಿಟ್ಟು ದಾನಮಾಡಿ...' —ತರಕಾರಿ ಮಾರಲು ಬರುವವರು ಬೀದಿಯಲ್ಲಿ ನಿಂತು 'ಕ್ಯಾರೆಟ್, ಸೌತೆಕಾಯಿ, ಬೀನ್ಸ್' ಎಂದು ಕೂಗು ಹಾಕುವಂತೆ ಈ ಅಜ್ಜನೂ ದೆಹಲಿಯ ಬೀದಿಗಳಲ್ಲಿ ನಿಂತು ಕೂಗು ಹಾಕುತ್ತಾರೆ. ಇಲ್ಲದಿದ್ದರೆ ಧ್ವನಿವರ್ಧಕದಲ್ಲಿ ಮನವಿ ಮಾಡುತ್ತಾರೆ. ಮನೆ–ಮನೆ ಬಾಗಿಲನ್ನೂ ಅವರು ತಟ್ಟುತ್ತಾರೆ. 88ರ ಇಳಿವಯಸ್ಸಿನಲ್ಲಿದ್ದರೂ ಅಂಗವೈಕಲ್ಯ ಕಾಡುತ್ತಿದ್ದರೂ ಬಡವರಿಗೆ ಸೇವೆ ಮಾಡುವ, ಅವರ ಕಣ್ಣೀರು ಒರೆಸುವ ಉತ್ಸಾಹ ಈ ಅಜ್ಜನಲ್ಲಿ ಒಂದಿನಿತೂ ಕುಂದಿಲ್ಲ. ದಿನ ಬೆಳಗಾದರೆ ಸಾಕು, ಬಗಲಿಗೊಂದು ಔಷಧಿಯ ಜೋಳಿಗೆ ಹಾಕಿಕೊಂಡು ಒಂದಿಲ್ಲೊಂದು ಬಡಾವಣೆಗೆ ಔಷಧಿ ಸಂಗ್ರಹಕ್ಕಾಗಿ ಹೊರಟು ಬಿಡುತ್ತಾರೆ.

ಓಂಕಾರನಾಥ್ ಶರ್ಮಾ ಎಂದರೆ ಕೆಲವರಿಗೆ ಯಾರೆಂದು ಗೊತ್ತಾಗದಿರಬಹುದು. ಆದರೆ, 'ಮೆಡಿಸಿನ್ ಬಾಬಾ' ಎಂದು ನೋಡಿ, ಹೆಸರು ಕೇಳಿದಾಕ್ಷಣ ಬಹುತೇಕರು ಕೈಮುಗಿದು ಅವರ ವಿವರ ಹೇಳುತ್ತಾರೆ. ಸರ್ಕಾರಿ ಆಸ್ಪತ್ರೆಗೆ ಸೇರಿ ಔಷಧಿ ಕೊಳ್ಳಲೂ ಸಾಧ್ಯವಾಗದೆ ಪರಿತಪಿಸುವವರು, ಆಸ್ಪತ್ರೆಗೆ ಹೋಗಲಾಗದೆ ಮನೆಯಲ್ಲಿಯೇ ನರಳುತ್ತಾ ಬಿದ್ದವರ ಪಾಲಿಗೆ 'ಮೆಡಿಸಿನ್ ಬಾಬಾ' ದೇವರ ಸ್ವರೂಪರಾಗಿದ್ದು, ಅವರಿಗೆ ಬೇಕಾದ ಜೀವರಕ್ಷಕಗಳನ್ನು ಒದಗಿಸುತ್ತಿದ್ದಾರೆ. ಕಳೆದ 17 ವರ್ಷಗಳಿಂದ ಅವರ ಈ ಔಷಧಿ ಸೇವೆ ನಿರಂತರವಾಗಿ ನಡೆದಿದೆ.

ದೆಹಲಿಯ ಒಂದೊಂದು ಪ್ರದೇಶಕ್ಕೆ ಒಂದೊಂದು ದಿನ ಹೋಗುವ ಬಾಬಾ, ಮನೆ–ಮನೆಯ ಬಾಗಿಲು ಬಡಿಯುತ್ತಾರೆ. 'ನಿಮ್ಮ ಮನೆಯಲ್ಲಿ ಬಳಕೆ ಮಾಡದೆ ಉಳಿದ ಔಷಧಿ ಇದ್ದರೆ ಹುಡುಕಿಕೊಡಿ. ಅವಧಿ ಮುಗಿಯುವ ದಿನ ಹತ್ತಿರವಾಗಿದ್ದರೆ ಅವುಗಳನ್ನು ಹಾಗೆ ಇಟ್ಟು ವ್ಯರ್ಥಗೊಳಿಸದೆ ಬಡವರಿಗಾಗಿ ದಾನ ಮಾಡಿ' ಎಂದು ಜೋಳಿಗೆಯನ್ನು ಮುಂದೆ ಮಾಡುತ್ತಾರೆ. ಬಾಬಾ ಅವರ ಬಡವರ ಪ್ರೀತಿಯನ್ನು ಕಂಡು ಬೆರಗಾಗುವ ಜನ, ತಮ್ಮ ಮನೆಯಲ್ಲಿ ಬಹಳ ದಿನಗಳಿಂದ ಬಳಕೆಯಾಗದೆ ಉಳಿದ ಔಷಧಿಗಳನ್ನು ಅವರಿಗೆ ನೀಡುತ್ತಾರೆ. ಬಾಬಾ ಅವುಗಳನ್ನು ಆಸ್ಪತ್ರೆಗಳು ಹಾಗೂ ವೈಯಕ್ತಿಕವಾಗಿ ಅಗತ್ಯವಿದ್ದವರಿಗೆ ತಲುಪಿಸಿ ಜೀವ ಉಳಿಸುವ, ನೋವು ಶಮನಗೊಳಿಸಲು ನೆರವಾಗುವ ಕೆಲಸ ಮಾಡುತ್ತಾರೆ. ಔಷಧಿ ಸಂಗ್ರಹಿಸಿ ತರುವ ಅವರ ಕಾರ್ಯವು ಸಾವಿರಾರು ಸಂಖ್ಯೆಯ ರೋಗಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ಸಿಗುವುದನ್ನು ಖಚಿತಪಡಿಸುತ್ತಿದೆ.

ವಯಸ್ಸಿನ ಕಾರಣದಿಂದ, ಅಂಗವೈಕಲ್ಯದಿಂದ ಬಾಬಾ ಅವರಿಗೆ ಹೆಚ್ಚು ದೂರ ಓಡಾಡುವುದು ಸಾಧ್ಯವಿಲ್ಲ. ಆದರೆ, ಅವರ ಸಮಾಜ ಸೇವೆಗೆ ಈ ಸಮಸ್ಯೆಗಳು ಅಡ್ಡಿ ಆಗಿಲ್ಲ. ಸರ್ಕಾರಿ ಬಸ್, ಮೆಟ್ರೊ ಹಾಗೂ ಆಟೊದಲ್ಲಿ ಓಡಾಡುವ ಅವರು, ಬಡಾವಣೆಗಳಲ್ಲಿ ನಡೆದುಕೊಂಡೇ ಹೋಗುತ್ತಾರೆ. ದಾರಿಹೋಕರ ಪಾಲಿಗೆ ಅವರೊಬ್ಬ ಮಾನವತೆಯನ್ನು ಸಾರುವ ಸಂತನಂತೆ ಗೋಚರಿಸುತ್ತಾರೆ. ಬಾಬಾ ಅವರು ಒಂದೂವರೆ ದಶಕದಲ್ಲಿ ಸಾಧ್ಯವಾದಷ್ಟು ಹೆಚ್ಚು ಸಂಚರಿಸಿ, ದೊಡ್ಡ ಪ್ರಮಾಣದಲ್ಲೇ ಔಷಧಿ ಸಂಗ್ರಹಿಸಿ ತಂದಿದ್ದಾರೆ. ಆದರೆ, ಔಷಧಿಗಾಗಿ ಅವರಿಗೆ ಬರುತ್ತಿರುವ ಬೇಡಿಕೆ ನಿರಂತರವಾಗಿ ಹೆಚ್ಚುತ್ತಲೇ ಇದೆ. 'ಮೆಡಿಸಿನ್ ಬ್ಯಾಂಕ್' ಒಂದನ್ನು ಸ್ಥಾಪಿಸಿ, ಅಸಹಾಯಕರ ಬೇಡಿಕೆಗೆ ತಕ್ಕಂತೆ ಪೂರೈಕೆ ಮಾಡಬೇಕು ಎನ್ನುವುದು ಬಾಬಾ ಅವರ ಆಸೆ. ಔಷಧಿಯನ್ನಾಗಲಿ, ಔಷಧಿ ಖರೀದಿಸಲು ಹಣವನ್ನಾಗಲಿ ದಾನಿಗಳು ಕೊಟ್ಟರೆ ಬಡವರ ಕಣ್ಣೀರು ಒರೆಸಲು ಇನ್ನಷ್ಟು ಶಕ್ತಿ ಬರುತ್ತದೆ ಎನ್ನುತ್ತಾರೆ ಬಾಬಾ.

ರಕ್ತ ನಿಧಿಯೊಂದರಲ್ಲಿ ಉದ್ಯೋಗಿಯಾಗಿ ನಿವೃತ್ತರಾಗಿದ್ದ ಬಾಬಾ ಅವರಿಗೆ ಔಷಧಿ ಸೇವೆ ಆರಂಭಿಸುವ ಯೋಚನೆ ಹೊಳೆದಿದ್ದು ಹೇಗೆ? ಅದಕ್ಕೆ ಬಾಬಾ ಅವರ ಬಳಿ ಉತ್ತರ ಸಿದ್ಧವಿದೆ. '2008ರಲ್ಲಿ ದೆಹಲಿಯ ಮೆಟ್ರೊ ಮಾರ್ಗ ನಿರ್ಮಾಣ ಕಾಮಗಾರಿ ನಡೆದಿದ್ದಾಗ ಒಂದು ಭಾಗ ಏಕಾಏಕಿ ಕುಸಿದು ಬಿದ್ದು, ನೂರಾರು ಜನ ಗಾಯಗೊಂಡರು. ಅವರಲ್ಲಿ ಬಹುತೇಕರು ಬೀದಿಯನ್ನೇ ಮನೆ ಎಂದು ಭಾವಿಸಿದ್ದ ನಿರ್ಗತಿಕರು. ಅವರಿಗೆ ನಿತ್ಯ ಹೊಟ್ಟೆ ತುಂಬಿಸಿಕೊಳ್ಳುವುದೇ ದುಸ್ತರವಾದಾಗ ಔಷಧಿಗೆ ಎಲ್ಲಿಂದ ದುಡ್ಡು ತರಬೇಕು? ಅವರ ಸ್ಥಿತಿಯನ್ನು ಕಂಡು ಒಂದು ಕ್ಷಣ ನಲುಗಿಹೋದೆ. ನನ್ನ ಬದುಕನ್ನು ಇಂಥವರ ಕಣ್ಣೀರು ಒರೆಸಲು ಮೀಸಲಿಡಬೇಕು ಎಂದು ಆಗಲೇ ನಿರ್ಧರಿಸಿ, ಬಗಲಿಗೆ ಜೋಳಿಗೆ ಹಾಕಿಕೊಂಡು ಹೊರಟುಬಿಟ್ಟೆ' ಎಂದು ಅವರು ವಿವರಿಸುತ್ತಾರೆ.

ಬಾಬಾ ಅವರ ಸದ್ದಿಲ್ಲದ ಸೇವೆ ದೊಡ್ಡ ಕ್ರಾಂತಿಯನ್ನೇ ಮಾಡಿದೆ. ಪ್ರತಿ ತಿಂಗಳು ₹ 5 ಲಕ್ಷದಿಂದ ₹ 6 ಲಕ್ಷದಷ್ಟು ಮೌಲ್ಯದ ಔಷಧಿ ಸಂಗ್ರಹಿಸಿ ಬಟವಾಡೆ ಮಾಡುತ್ತಾರೆ. 'ಒಮ್ಮೆ ದಾನಿಯೊಬ್ಬರು ₹ 7 ಲಕ್ಷ ಮೌಲ್ಯದ ಮೂರು ಮಾತ್ರೆಗಳನ್ನು ಕೊಟ್ಟರು. ಇದರಿಂದ ಏಮ್ಸ್‌ನಲ್ಲಿ ಬಡರೋಗಿಯೊಬ್ಬರ ಚಿಕಿತ್ಸೆ ಸರಾಗವಾಗಿ ನಡೆಯುವಂತಾಯಿತು. ಮೂತ್ರಪಿಂಡ ಕಸಿ ಚಿಕಿತ್ಸೆಗೆ ಒಳಗಾದ 21 ರೋಗಿಗಳಿಗೆ ದುಬಾರಿ ಬೆಲೆಯ ಔಷಧಿಯನ್ನೂ ಸಂಗ್ರಹಿಸಿಕೊಟ್ಟಿದ್ದೆ. ಸ್ಟ್ರೆಚರ್ ಮೇಲೆ ಬಂದಿದ್ದ ವ್ಯಕ್ತಿಯೊಬ್ಬರು ನಾನು ಸಂಗ್ರಹಿಸಿಕೊಟ್ಟ ಔಷಧಿಯಿಂದ ಚೇತರಿಸಿಕೊಂಡು ನಡೆದುಕೊಂಡು ಮನೆಗೆ ಹೋಗಿದ್ದು ನನ್ನ ಬದುಕಿನ ಸಾರ್ಥಕ ಕ್ಷಣ' ಎಂದು ಅವರು ನೆನೆಯುತ್ತಾರೆ.

'ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಮನೆ–ಮನೆಗೆ ಹೋಗುವುದು ಸಾಧ್ಯವಾಗಿರಲಿಲ್ಲ. ಆಗ ದೇವಾಲಯ, ಗುರುದ್ವಾರ, ಮಸೀದಿ, ಸ್ಮಶಾನ ಮೊದಲಾದ ಕಡೆಗಳಲ್ಲಿ ಔಷಧಿ ಸಂಗ್ರಹಿಸಲು ಡಬ್ಬಿಗಳನ್ನು ಇಟ್ಟಿದ್ದೆ. ಬಳಸದೆ ಉಳಿದ ಔಷಧಿಯನ್ನು ಜನ ಅದರಲ್ಲಿ ತಂದು ಹಾಕುತ್ತಿದ್ದರು. ನಾನು ಹೋಗಿ ಸಂಗ್ರಹಿಸಿಕೊಂಡು ಬಂದು, ಆಸ್ಪತ್ರೆಯಲ್ಲಿ ಬಡರೋಗಿಗಳಿಗೆ ಕೊಡುತ್ತಿದ್ದೆ' ಎಂದು ಆಗಿನ ದಿನಗಳನ್ನು ಮೆಲುಕು ಹಾಕುತ್ತಾರೆ.

ಬಾಬಾ ಅವರ ಸೇವೆಯನ್ನು ಕಂಡು ಜನ ವಿದೇಶದಿಂದಲೂ ಔಷಧಿ ಕಳಿಸುತ್ತಾರೆ. ದೆಹಲಿಯ ಅವರ ಮೂರು ರೂಮುಗಳ ಪುಟ್ಟ ಮನೆಯಲ್ಲಿ ಎರಡು ರೂಮುಗಳಲ್ಲಿ ಔಷಧಿಯ ದಾಸ್ತಾನು ತುಂಬಿಹೋಗಿದೆ. ಆಕ್ಸಿಜನ್ ಸಿಲಿಂಡರ್‌ಗಳು, ವ್ಹೀಲ್ ಚೇರ್‌ಗಳು, ದುಬಾರಿ ಬೆಲೆಯ ಇಂಜೆಕ್ಷನ್‌ಗಳು ಅವರ ಸಂಗ್ರಹದಲ್ಲಿವೆ. ಆಸ್ಪತ್ರೆಗಳಿಂದ ಕರೆಬಂದ ತಕ್ಷಣ ಅಗತ್ಯ ಔಷಧಿ, ಉಪಕರಣಗಳನ್ನು ಅವರು ತೆಗೆದುಕೊಂಡು ಹೋಗುತ್ತಾರೆ.

ನಕಲಿ ಬಾಬಾಗಳೇ ಹೆಚ್ಚಾಗಿ ತುಂಬಿರುವ ದೇಶದಲ್ಲಿ ಈ ಅಸಲಿ ಬಾಬಾ ಬಡವರ ಪಾಲಿಗೆ ಅಕ್ಷರಶಃ ದೇವರಂತೆ ಕಂಗೊಳಿಸುತ್ತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65